ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	16 (26)
ಸದಸ್ಯರ ಹೆಸರು	ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	07.12.2020
ಉತ್ತರಿಸಬೇಕಾದ ಸಚಿವರು	ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)

	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ಅತಿಥಿ ಉಪನ್ಯಾಸಕರುಗಳ ಸಂಖ್ಯೆ ಎಷ್ಟು?	**ಕಾಲೇಜು ಶಿಕ್ಷಣ** 2019-20ನೇ ಶೈಕ್ಷಣಿಕ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಒಟ್ಟು 14447 ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸಿರುತ್ತಾರೆ. **ತಾಂತ್ರಿಕ ಶಿಕ್ಷಣ** ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಖೆ ಮತ್ತು ಸರ್ಕಾರಿ ಇಂಜಿನಿಯರಿಂಗ ಕಾಲೇಜುಗಳಲ್ಲಿ 2019-20ನೇ ಸಾಲಿನಲ್ಲಿ 1323 ಅತಿಥಿ ಉಪನ್ಯಾಸಕರುಗಳು ಕಾರ್ಯ ನಿರ್ವಹಿಸಿರುತ್ತಾರೆ. 2020-21ನೇ ಸಾಲಿಗೆ ಅರೆಕಾಲಿಕ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. **ವಿಶ್ವವಿದ್ಯಾಲಯ** ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರಸಂ	ವಿಶ್ವವಿದ್ಯಾಲಯದ ಹೆಸರು	ಅತಿಥಿ ಉಪನ್ಯಾಸಕರ ಸಂಖ್ಯೆ
1	ಬೆಂಗಳೂರು ವಿಶ್ವವಿದ್ಯಾಲಯ	430
2	ಕರ್ನಾಟಕ ವಿಶ್ವವಿದ್ಯಾಲಯ	519
3	ಮೈಸೂರು ವಿಶ್ವವಿದ್ಯಾಲಯ	836
4	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ	01
6	ದಾವಣಗೆರೆ ವಿಶ್ವವಿದ್ಯಾಲಯ	43
7	ಗುಲ್ಬರ್ಗಾ ವಿಶ್ವವಿದ್ಯಾಲಯ	343
8	ರಾಣಿ ಚನ್ನಮ್ಮ ವಿಶ್ವವಿದ್ಯಾಲಯ	66
9	ಕರ್ನಾಟಕ ಜಾನಪದ ವಿಶ್ವವಿದ್ಯಾಲಯ	35
10	ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ	83
11	ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ	38
12	ಕುವೆಂಪು ವಿಶ್ವವಿದ್ಯಾಲಯ	334
13	ಮಂಗಳೂರು ವಿಶ್ವವಿದ್ಯಾಲಯ	335

<table>
<tr>
<td></td>
<td></td>
<td>
<table>
<tr><td>14</td><td>ತುಮಕೂರು ವಿಶ್ವವಿದ್ಯಾಲಯ</td><td>181</td></tr>
<tr><td>15</td><td>ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ</td><td>31</td></tr>
<tr><td>16</td><td>ಬೆಂಗಳೂರು ನಗರ ವಿಶ್ವವಿದ್ಯಾಲಯ</td><td>154</td></tr>
<tr><td>17</td><td>ಬೆಂಗಳೂರು ಉತ್ತರ ವಿಶ್ವವಿದ್ಯಾಲಯ</td><td>57</td></tr>
<tr><td></td><td>ಒಟ್ಟು</td><td>3486</td></tr>
</table>
</td>
</tr>
<tr>
<td>ಆ)</td>
<td>ಸದರಿ ಉಪನ್ಯಾಸಕರುಗಳಿಗೆ ವೇತನವು ಸರಿಯಾಗಿ ದೊರಕದೇ, ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:</td>
<td>ಬಂದಿದೆ.</td>
</tr>
<tr>
<td>ಇ)</td>
<td>ಹಾಗಿದ್ದಲ್ಲಿ, ವೇತನವು ಸರಿಯಾಗಿ ದೊರಕುವಂತಾಗಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td>
<td>
<u>ಕಾಲೇಜು ಶಿಕ್ಷಣ</u>
1) 2019-20ನೇ ಶೈಕ್ಷಣಿಕ ಸಾಲಿನಲ್ಲಿ ಜುಲೈ 2019 ರಿಂದ 23.03.2020 ರವರೆಗೆ ಅಂದರೆ ಲಾಕ್‌ಡೌನ್ ಪ್ರಾರಂಭವಾದ ದಿನಾಂಕ: 23.03.2020ರ ನಿಕಟಪೂರ್ವ ದಿನಾಂಕದವರೆಗೆ ಕರ್ತವ್ಯ ನಿರ್ವಹಿಸಿದ ಪೂರ್ಣ ಅವಧಿಗೆ ಸಂಭಾವನೆಯನ್ನು ಪಾವತಿಸಲಾಗಿರುತ್ತದೆ.
2) ಸರ್ಕಾರದ ಆದೇಶ ಸಂಖ್ಯೆ: ಇಡಿ 166 ಹೆಚ್‌ಪಿಸಿ 2020, ದಿನಾಂಕ: 13.11.2020 ರಂದು ಕೋವಿಡ್ 19 ಸಾಂಕ್ರಮಿಕ ರೋಗದ ಹಿನ್ನಲೆಯಲ್ಲಿ 24.03.2020 ದೇಶಾದ್ಯಂತ ಲಾಕ್‌ಡೌನ್ ಜಾರಿಯಾಗಿದ್ದು, ಈ ದಿನಾಂಕದಿಂದ ಆಗಸ್ಟ್ 2020ರ ಅವಧಿಯನ್ನು ವಿಶೇಷ ಪ್ರಕರಣದಡಿಯಲ್ಲಿ ಕರ್ತವ್ಯದ ಅವಧಿಯೆಂದು ಪರಿಗಣಿಸಿ ರೂ.85,91,77,857/- ಗೌರವಧನ ಪಾವತಿ ಮಾಡಲು ಅನುಮತಿ ನೀಡಲಾಗಿದ್ದು, ಈಗಾಗಲೇ ಬಿಡುಗಡೆಯಾಗಿರುವ ಅನುದಾನ ರೂ.43,30,01,223/- ಸಂಭಾವನೆ ಪಾವತಿಗೆ ಕ್ರಮವಹಿಸಲಾಗಿರುತ್ತದೆ.
<u>ತಾಂತ್ರಿಕ ಶಿಕ್ಷಣ ಇಲಾಖೆ</u>
2020-21ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ಭತ್ಯೆ ಪಾವತಿಸಲು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ರೂ.408.00 ಲಕ್ಷಗಳನ್ನು ಹಾಗೂ ಸರ್ಕಾರಿ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಅತಿಥಿ ಉಪನ್ಯಾಸಕರ ಭತ್ಯೆ ಪಾವತಿಸಲು ರೂ. 1286.00 ಲಕ್ಷಗಳನ್ನು ಸರ್ಕಾರದಿಂದ ಒದಗಿಸಲಾಗಿದೆ.
ಸರ್ಕಾರವು 2020-21ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ಭತ್ಯೆ ಪಾವತಿಸಲು ಒದಗಿಸಿರುವ ಒಟ್ಟು ರೂ.1694.00 ಲಕ್ಷಗಳಲ್ಲಿ 2019-20 ಮತ್ತು ಹಿಂದಿನ ಸಾಲಿನಲ್ಲಿ ಅತಿಥಿ ಉಪನ್ಯಾಸಕರಿಗೆ ಪಾವತಿಸಬೇಕಾದ ಬಾಕಿ ಗೌರವಧನವನ್ನು ಪಾವತಿಸಲು ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ಪತ್ರ ಸಂಖ್ಯೆ: ಇಡಿ 23 ಹೆಚ್‌ಪಿಟಿ 2019 (ಭಾಗ-2), ದಿನಾಂಕ 08.10.2020 ರಲ್ಲಿ ಅನುಮತಿ ನೀಡಿ ಆದೇಶಿಸಿದೆ. ಈ ಸಂಬಂಧ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಅತಿಥಿ ಉಪನ್ಯಾಸಕರಿಗೆ ಈಗಾಗಲೇ
</td>
</tr>
</table>

		ಬಾಕಿವೇತನವನ್ನು ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2020-21 ನೇ ಸಾಲಿನಿಂದ ಸರ್ಕಾರವು ಅತಿಥಿ ಉಪನ್ಯಾಸಕರ ಭತ್ಯೆ ಪಾವತಿಸಲು ಪ್ರತ್ಯೇಕ "ಉಪ ಶೀರ್ಷಿಕೆ 324 - ಗೌರವಧನ" ವನ್ನು ಸೃಜಿಸಿ ಅನುದಾನವನ್ನು ಒದಗಿಸಿದೆ. ಇದರಿಂದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ವೇತನವನ್ನು ಮಾಹೆಯಾನ ದೊರಕುವಂತೆ ಕ್ರಮವಹಿಸಲಾಗಿದೆ. **ವಿಶ್ವವಿದ್ಯಾಲಯ** ಯುಜಿಸಿ ಮಾರ್ಗಸೂಚಿಗಳನ್ವಯ ಅತಿಥಿ ಉಪನ್ಯಾಸಕರ ವಿದ್ಯಾರ್ಹತೆ ಹಾಗೂ ಕಾರ್ಯಭಾರವನ್ನು ಅನುಸರಿಸಿ ವಿಶ್ವವಿದ್ಯಾಲಯಗಳು ವೇತನ ನೀಡುತ್ತಿವೆ.

ಇಡಿ 222 ಡಿಸಿಇ 2020

(ಡಾ. ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)